## ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 30.12.2020ರಂದು ಪೂರ್ವಾಹ್ನ ಗಂಟೆ 10:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2020ನೇ ಸಾಲಿನ ಚತುರ್ಥ ವಿಶೇಷ ಸಭೆಯ ನಡವಳಿಗಳು.**

**ಉಪಸ್ಥಿತರು**

**ಅನುಪಸ್ಥಿತರು**

**ಪ್ರಾರಂಭಿಕ**

ಪ್ರಾರಂಭದಲ್ಲಿ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಹಾಗೂ ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು. ಸಭೆಯನ್ನು ಮುಂದುವರಿಸುವಂತೆ ಮಾನ್ಯ ಕುಲಪತಿಗಳನ್ನು ವಿನಂತಿಸಿದರು.

## I. ನಡವಳಿಗಳ ದೃಢೀಕರಣ

ದಿನಾಂಕ 17.12.2020ರಂದು ನಡೆದ 2020ನೇ ಸಾಲಿನ **ಎಂಟನೇ ಸಾಮಾನ್ಯ ಸಭೆಯ** ನಡವಳಿಯನ್ನು ಈ ಕೆಳಗಿನಂತೆ ತಿದ್ದುಪಡಿ ಮಾಡಿ ದೃಢೀಕರಿಸಲಾಯಿತು.

**ಪ್ರಾಸ್ತಾವಿಕ ವಿಷಯದ ಕ್ರಮ ಸಂಖ್ಯೆ 6ನ್ನು ಈ ಕೆಳಗಿನಂತೆ ತಿದ್ದುಪಡಿ ಮಾಡುವುದು.**

6. ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ವೇಳಾಪಟ್ಟಿಗೆ ಯಾವುದೇ ರೀತಿಯ ತೊಂದರೆ ಆಗದ ರೀತಿಯಲ್ಲಿ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಿಗೆ ಈ ಹಿಂದಿನ ಪದ್ಧತಿಯಂತೆ **ಚಳಿಗಾಲದ** ರಜಾದಿನಗಳನ್ನು ದಿನಾಂಕ 26.12.2020 ರಿಂದ ದಿನಾಂಕ 31.12.2020ರವರೆಗೆ ನೀಡಿರುವ ವಿಷಯವನ್ನು ಸಭೆಯ ಗಮನಕ್ಕೆ ತಂದರು.

**ಇತರ ವಿಷಯಗಳ ಕ್ರಮ ಸಂಖ್ಯೆ: 5 (b) ನ್ನು ಈ ಕೆಳಗಿನಂತೆ ತಿದ್ದುಪಡಿ ಮಾಡುವುದು ಹಾಗೂ 5 (f) ನ್ನು ಅಳಿಸುವುದು.**

b. ಅರೆಭಾಷೆ ಕನ್ನಡ ಅಧ್ಯಯನ ಪೀಠ, ಕುಂದಾಪುರ ಕನ್ನಡ ಭಾಷೆಗಳ ಅಧ್ಯಯನ ಪೀಠ ಮತ್ತು ಹರದಾಸ ಅಪ್ಪಚ್ಚ ಕವಿ ಅಧ್ಯಯನ ಪೀಠಗಳನ್ನು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲು ಸೂಕ್ತ ಕ್ರಮಕೈಗೊಂಡು ಈ ಬಗ್ಗೆ ಅನುದಾನ ಕೋರಿ ಸರ್ಕಾರಕ್ಕೆ ಪತ್ರ ಬರೆಯಲು ಕ್ರಮ ಕೈಗೊಳ್ಳುವಂತೆ ಸಿಂಡಿಕೇಟು ನಿರ್ಣಯಿಸಿತು.

**ಇತರ ವಿಷಯಗಳ ಕ್ರಮ ಸಂಖ್ಯೆ: 7 ನ್ನು ಈ ಕೆಳಗಿನಂತೆ ತಿದ್ದುಪಡಿ ಮಾಡುವುದು.**

7. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿಗಳ ವರ್ಗಾವಣೆಗೆ ಸಂಬಂಧಿಸಿ, ''ಏಕರೂಪ ವರ್ಗಾವಣಾ ಮಾರ್ಗಸೂಚಿ''ಯನ್ನು ತಯಾರಿಸಲು ಸಮಿತಿ

ರಚನೆಯಾಗಿದ್ದು, ಸದರಿ ಸಮಿತಿಯು ಶೀಘ್ರದಲ್ಲಿ ತನ್ನ ವರದಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವುದಾಗಿ ಸಮಿತಿಯ ಅಧ್ಯಕ್ಷರಾದ ಶ್ರೀ ವಿವೇಕಾನಂದ ಪನಿಯಾಲ, ಮಾನ್ಯ ಸಿಂಡಿಕೇಟು ಸದಸ್ಯರು ಇವರು ಸಭೆಗೆ ಮಾಹಿತಿ ನೀಡಿರುತ್ತಾರೆ. ಆದುದರಿಂದ ಶಿಕ್ಷಕ ಮತ್ತು ಶೀಕ್ಷಕೇತರ ಸಿಬ್ಬಂದಿಗಳ ವರ್ಗಾವಣೆಗೆ ಸಂಬಂಧಿಸಿ, ಸದರಿಯವರುಗಳು ಮಾಡಿಕೊಂಡಿರುವ ಮನವಿಗಳನ್ನು ಈ ವರದಿ ಸ್ವೀಕೃತವಾದ ಬಳಿಕವೇ ಪರಿಶೀಲಿಸಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. ಆದುದರಿಂದ ಡಾ. ನಾಗಪ್ಪ ಗೌಡ ಆರ್., ಸಹ ಪ್ರಾಧ್ಯಾಪಕರು, ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ ಇವರನ್ನು ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಇಲ್ಲಿಗೆ ನಿಯೋಜನೆ ಮಾಡುವಂತೆ ಸದರಿಯವರು ಮಾಡಿಕೊಂಡಿರುವ ಮನವಿಯನ್ನು ಕೂಡ ನಂತರವೇ ಪರಿಗಣಿಸಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ.8:24(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಎ.ಸಿ ಮೆಕ್ಯಾನಿಕ್ ಸೇವೆಯನ್ನು ತಾತ್ಕಾಲಿಕ ನೆಲೆಯಲ್ಲಿ ಬಳಸಿಕೊಳ್ಳುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ತಿದ್ದುಪಡಿ:** ಮೇಲಿನ ಕಾರ್ಯಸೂಚಿಯಲ್ಲಿ ಪ್ರಸ್ತಾವಿಸಲಾದ ವಿಷಯಕ್ಕೆ ಸಂಬಂಧಿಸಿ, ಪಾರಾ 2ರ ನಾಲ್ಕನೇ ಸಾಲಿನಲ್ಲಿ ನಮೂದಿಸಲಾದ "*ಆದರೆ ಕುಲಸಚಿವರ ಅಧಿಸೂಚನೆ ಸಂಖ್ಯೆ:MU/12/EST(2)/2004-05 ದಿನಾಂಕ 11.02.2008_______________________________________ ಸರ್ಕಾರದ ಅನುಮೋದನೆಗೆ ಸಲ್ಲಿಸಲು ಕ್ರಮಕ್ಕೈಗೊಳ್ಳಬಹುದೆಂದು ಅಭಿಪ್ರಾಯಿಸಲಾಗಿದೆ.*" ಈ ವಿಷಯವನ್ನು ಕಾರ್ಯಸೂಚಿಯಿಂದ ಅಳಿಸುವುದು.

## II. ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ವಿ.ಸ.4:01(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿ ಇವರ ದೂರಿನ ಕುರಿತು ಮಂಗಳೂರು ವಿಶ್ವವಿದ್ಯಾನಿಲಯದ ಆಂತರಿಕ ದೂರು ಸಮಿತಿಯು ತನಿಖೆ ನಡೆಸಿ ಸಲ್ಲಿಸಿದ ವರದಿಯ ಆಧಾರದಲ್ಲಿ ಶಿಸ್ತು ಕ್ರಮ ಕೈಗೊಳ್ಳುವ ಬಗ್ಗೆ.

**ನಿರ್ಣಯ:** The syndicate has perused the statement of objections filed by the University in WP No. 15070/ 2020 (S). The same is in order. Hence, it has been unanimously resolved to approve the action taken by the Registrar.

The syndicate hereby also unanimously authorises the Registrar to file additional statement of objections if any and production of documents in support thereof to effectively defend the action taken by the University which is under challenge. The Registrar is further fully authorised to engage the service of designated senior High Court Advocate in the matter given the gravity of the case

and complexity involved.

In view of the fact that the victim of sexual harassment / student (who is not permitted to be named) to respect her dignity, privacy, and confidentiality given the vulnerability of nay victimisation and social stigma), the delinquent Prof. Arabi U. shall continue to be placed under suspension for two more months.

In view of the filing of the writ petition by Dr. Arabi U. before the Hon'ble High Court of Karnataka in in WP No. 15070/ 2020 (S), the Syndicate has unanimously resolved to postpone the matter to the next meeting of the syndicate for consideration since, counsel for the University has undertaken not to take any precipitatory action. The Syndicate has further decided to review the matter having regard to the outcome of the hearing, which is going to be listed after the winter vacation.

The university has further resolved to defend the report of the ICC and action of the University based on its merit in accordance with law in the interest of the institution and public at large.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ವಿ.ಸ.4:02(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿ ಇವರ ದೂರಿನ ಕುರಿತು ಮಂಗಳೂರು ವಿಶ್ವವಿದ್ಯಾನಿಲಯದ ಆಂತರಿಕ ದೂರು ಸಮಿತಿಯು ತನಿಖೆ ನಡೆಸಿ ಸಲ್ಲಿಸಿದ ವರದಿಯನ್ನು ಕುಲಪತಿಗಳ ಗಮನಕ್ಕೆ ತಾರದೆ, ಸಿಂಡಿಕೇಟಿಗೆ ಮಂಡಿಸದೇ ಕರ್ತವ್ಯ ಲೋಪ ಎಸಗಿರುವ ಬಗ್ಗೆ.

**ನಿರ್ಣಯ:** The Syndicate has given anxious and thoughtful consideration to the subject matter. The Syndicate welcomes the opinion of the Hon'ble Government vide reference government letter no. ED67UDV2020 dated 18-12-2020. In view of the clarity given by the government of Karnataka stating that University is the "Competent Authority" under the "Statute Governing Classification, Control and Appeal Rules of Mangalore University", the Syndicate unanimously resolves to conduct enquiry/ disciplinary enquiry as stipulated by the applicable service rules by a retired Judge. The enquiry report shall be submitted within a period of 30 days after receipt of the written explanation of Prof. A. M Khan in response to the memo of charges to be issued by the enquiry officer in this regard.

The syndicate will consider the report of the committee appropriately and in accordance with law.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ವಿ.ಸ.4:03(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗಳಿಗೆ ಆರೋಗ್ಯ ಕೇಂದ್ರದಲ್ಲಿ ದಂತ ವೈದ್ಯಕೀಯ ಸೇವೆಯನ್ನು ನೀಡುವ ಬಗ್ಗೆ ನಿಟ್ಟೆ ವಿಶ್ವವಿದ್ಯಾನಿಲಯ, ಮೆಡಿಕಲ್ ಸೈನ್ಸ್ ಕಾಂಪ್ಲೆಕ್ಸ್, ದೇರಳಕಟ್ಟೆ, ಮಂಗಳೂರು ಇವರೊಂದಿಗೆ ಒಡಂಬಡಿಕೆ (MoU) ಮಾಡಿಕೊಳ್ಳುವ ಪ್ರಸ್ತಾವನೆಗೆ ಅನುಮೋದನೆ ನೀಡುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಚರ್ಚಿಸಿ ಅನುಮೋದಿಸಲಾಯಿತು. ಸದರಿ ದಂತ ವೈದ್ಯಕೀಯ ಸೇವೆಯಿಂದ ದಂತ ಸೌಂದರ್ಯವರ್ಧಕ ಸೌಲಭ್ಯಗಳನ್ನು ಹೊರತುಪಡಿಸಿ ಉಳಿದಂತೆ ಎಲ್ಲಾ ಸೌಲಭ್ಯಗಳನ್ನು ಒದಗಿಸಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಇಡಿ ವಿ.ಸ.4:04(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ನೂತನ ನೀರು ಸರಬರಾಜು ಟ್ಯಾಂಕರನ್ನು ಹೊಂದಿರುವ ವಾಹನ (Vehicle mounted water tank) ವನ್ನು ಖರೀದಿಸುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯ ಬಗ್ಗೆ ವಿಸ್ತೃತ ಮಾಹಿತಿಯ ಅಗತ್ಯವಿರುವುದರಿಂದ ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ವಿ.ಸ.4:05(2020)

**ವಿಷಯ:** ಶೈಕ್ಷಣಿಕ ವರ್ಷ 2020–21ನೇ ಸಾಲಿಗೆ ವಿಸ್ತರಣಾ ಸಂಯೋಜನೆಗೆ ಅರ್ಜಿ ಸಲ್ಲಿಸಿರುವ ಕೆಲವು ಕಾಲೇಜುಗಳ ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು Online Affiliation ತಂತ್ರಾಂಶದಲ್ಲಿ ಸಲ್ಲಿಸುವ ಕುರಿತು.

**ನಿರ್ಣಯ:** ದಿನಾಂಕ 23.12.2020ರಂದು ನಡೆದ ಶೈಕ್ಷಣಿಕ ಮಂಡಳಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ವಿ.ಸ.4:06(2020)

**ವಿಷಯ:** ಕವಿತಾ ಚಾರಿಟೇಬಲ್ ಟ್ರಸ್ಟ್(ರಿ.) ವತಿಯಿಂದ ನಡೆಸಲ್ಪಡುವ ಸೈಂಟ್ ಲೂರ್ಡ್ಸ್ ಸ್ಪೀಚ್ ಅಂಡ್ ಹಿಯರಿಂಗ್, ಅಡ್ಯಾರ, ಎಂಬ ವಿದ್ಯಾ ಸಂಸ್ಥೆಗೆ ಶೈಕ್ಷಣಿಕ ವರ್ಷ 2020–21ನೇ ಸಾಲಿಗೆ ಹೊಸ ಸಂಯೋಜನಾ ಮುಂಜೂರಾತಿ ಬಗ್ಗೆ.

**ನಿರ್ಣಯ:** ದಿನಾಂಕ 23.12.2020ರಂದು ನಡೆದ ಶೈಕ್ಷಣಿಕ ಮಂಡಳಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ವಿ.ಸ.4:07(2020)

**ವಿಷಯ:** ಗ್ಲೋರಿಯಾ ಕಾಲೇಜು, ಪುತ್ತೂರು ಈ ವಿದ್ಯಾಸಂಸ್ಥೆಯಲ್ಲಿ ಶೈಕ್ಷಣಿಕ ವರ್ಷ 2020–21ನೇ ಸಾಲಿಗೆ ಮುಂದುವರಿಕೆ/ವಿಸ್ತರಣಾ ಸಂಯೋಜನೆ ನೀಡುವ ಬಗ್ಗೆ.

**ನಿರ್ಣಯ:** ದಿನಾಂಕ 23.12.2020ರಂದು ನಡೆದ ಶೈಕ್ಷಣಿಕ ಮಂಡಳಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ವಿ.ಸ.4:08(2020)

**ವಿಷಯ:** ಡಾ. ಶಾಮಸುಂದರ ಜೆ., ಸಹಾಯಕ ಪ್ರಾಧ್ಯಾಪಕರು ಮತ್ತು ಸಂಯೋಜಕರು ಪಿ.ಜಿ.ಡಿಪ್ಲೋಮಾ ಇನ್ ಯೋಗವಿಜ್ಞಾನ ಕಾರ್ಯಕ್ರಮ, ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಇವರಿಗೆ ಸಂಶೋಧನಾ ಮಾರ್ಗದರ್ಶಕರಾಗಿ ಮಾನ್ಯತೆ ನೀಡುವ ಬಗ್ಗೆ.

**ನಿರ್ಣಯ:** ವಿಶ್ವವಿದ್ಯಾನಿಲಯದ ನಿಯಮಾನುಸಾರ ಡಾ. ಶಾಮಸುಂದರ ಜೆ., ಇವರನ್ನು ಸಂಶೋಧನಾ ಮಾರ್ಗದರ್ಶಕರನ್ನಾಗಿ ಮಾನ್ಯತೆ ಮಾಡಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ವಿ.ಸ.4:09(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಸೌರ ಮೇಲ್ಛಾವಣಿ ವ್ಯವಸ್ಥೆ ಅಳವಡಿಸಿದ ಬಗ್ಗೆ ಕಾಲಾನುಕ್ರಮದ ವರದಿ.

**ನಿರ್ಣಯ:** ಮೆ. ವಿ. ಎನ್. ಸೋಲಾರ್, ಮಂಗಳೂರು ಇವರು ಮಂಗಳೂರು ವಿಶ್ವವಿದ್ಯಾನಿಲಯದ ಸೌರ ಮೇಲ್ಛಾವಣಿಗೆ ಅಳವಡಿಸಿದ ವಸ್ತುಗಳ ಪರಿಶೀಲನೆ ನಡೆಸಿದ ಬಗ್ಗೆ ಸಲ್ಲಿಸಿದ ಮಧ್ಯಂತರ ವರದಿಯ ಮೇಲೆ ಸಮಗ್ರ ಅಧ್ಯಯನ ನಡೆಸಿ ಮುಂದಿನ ಸೂಕ್ತ ಕ್ರಮಕೈಗೊಳ್ಳಲು ಕುಲಸಚಿವರಿಗೆ ಅಧಿಕಾರ ನೀಡಲಾಯಿತು.
ಸದರಿ ಉಪಕರಣವನ್ನು ಸುಸ್ಥಿತಿಗೆ ತರಲು ತುರ್ತಾಗಿ ಸೂಕ್ತ ತಾಂತ್ರಿಕ ಕ್ರಮಗಳನ್ನು ಕೈಗೆತ್ತಿಕೊಳ್ಳಲು ಸಿಂಡಿಕೇಟು ನಿರ್ಣಯಿಸಿತು.

**ಇತರ ವಿಷಯಗಳು:**

1. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ Gender Sensitization ಬಗ್ಗೆ ಪ್ರತಿಯೊಬ್ಬ ಸಿಬ್ಬಂದಿ ಮತ್ತು ವಿದ್ಯಾರ್ಥಿಗೆ ಮಾಹಿತಿ ನೀಡಿ ಅರಿವು ಮೂಡಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮಕೈಗೊಳ್ಳುವಂತೆ ಸಿಂಡಿಕೇಟು ನಿರ್ಣಯಿಸಿತು.

2. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸಿಂಡಿಕೇಟು ಸಭೆಗಳಿಗೆ ಹಾಜರಾಗುತ್ತಿರುವ ಬಾಹ್ಯ ಸದಸ್ಯರುಗಳಿಗೆ ನೀಡಲಾಗುತ್ತಿರುವ ಉಪಸ್ಥಿತಿ ಭತ್ಯೆಯನ್ನು ರೂ.2,000.00 (ರೂಪಾಯಿ ಎರಡು ಸಾವಿರ ಮಾತ್ರ)ದಿಂದ ರೂ.3,000.00 (ರೂಪಾಯಿ ಮೂರು ಸಾವಿರ ಮಾತ್ರ) ಕ್ಕೆ ಹೆಚ್ಚಿಸಲು ನಿರ್ಣಯಿಸಲಾಯಿತು.

3. Allied subjects (ಸಂಬಂಧಿತ ವಿಷಯ)ಗಳಲ್ಲಿ ಸಂಶೋಧನೆ ಮಾಡಿ, ಪಿಹೆಚ್‌ಡಿ ಪದವಿ ಪಡೆದಿರುವ ಖಾಯಂ ಉಪನ್ಯಾಸಕರಿಗೆ ವೇತನ ಭಡ್ತಿ ನೀಡಲು ಪ್ರಸ್ತುತ ನಿಯಮಾವಳಿ ಪ್ರಕಾರ ಸಾಧ್ಯವಿಲ್ಲದಿರುವುದರಿಂದ Allied subjects (ಸಂಬಂಧಿತ ವಿಷಯ)ಗಳಲ್ಲಿ ಸಂಶೋಧನೆ ಮಾಡಿ, ಪಿಹೆಚ್‌ಡಿ ಪದವಿ ಪಡೆದಿರುವ ಖಾಯಂ ಉಪನ್ಯಾಸಕರಿಗೂ ವೇತನ ಭಡ್ತಿಯ ಅವಕಾಶಕ್ಕಾಗಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಸಭೆಗೆ ಕಾರ್ಯಸೂಚಿ ಮಂಡಿಸಲು ಕ್ರಮ ಕೈಗೊಳ್ಳಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

4. ಡಾ. ಭಾರತಿ ಪಿಲಾರ್, ಸಹಾಯಕ ಪ್ರಾಧ್ಯಾಪಕರು, ಗಣಕವಿಜ್ಞಾನ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇವರನ್ನು ಮಾನ್ಯ ಕುಲಪತಿಗಳ ಆಪ್ತ ಕಾರ್ಯಾಲಯದಲ್ಲಿ ವಿಶೇಷಾಧಿಕಾರಿಯನ್ನಾಗಿ ನೇಮಿಸಲು ನಿರ್ಣಯಿಸಲಾಯಿತು.

ಮಾನ್ಯ ಕುಲಪತಿಗಳು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/–
ಕುಲಸಚಿವರು

ಸಹಿ/–
ಕುಲಪತಿಗಳು.